**ಕರ್ನಾಟಕ ಸರ್ಕಾರ**

ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಫ್ಲಾಟ್ ನಂ. 1,2,3,4, ಕೆ.ಎಸ್.ಐ.ಐ.ಡಿ.ಸಿ, ರಾಜಾಜಿನಗರ ಐಟಿ ಪಾರ್ಕ್

5ನೇ ಮಹಡಿ, ಸೌತ್ ಬ್ಲಾಕ್ಸ್, ರಾಜಾಜಿನಗರ ಇಂಡಸ್ಟ್ರೀಯಲ್ ಎಸ್ಟೇಟ್, ಬೆಂಗಳೂರು-10

ದೂರವಾಣಿ ಸಂಖ್ಯೆ: 080-22372738, ಈ-ಮೇಲ್ : karnregshorti@gmail.com

ಆರ್‌ಡಿಸಿ-ಇಜಿಎಸ್/759/2022 ದಿನಾಂಕ: 16-11-2022

**ಜಂಟಿ ಸುತ್ತೋಲೆ**

**ವಿಷಯ:** ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಗ್ರಾಮ ಪಂಚಾಯತಿ **ಗೋಮಾಳ ಪ್ರದೇಶ**ವನ್ನು ವಿವಿಧ ಅನುಷ್ಠಾನ ಇಲಾಖೆಗಳೊಂದಿಗೆ ಒಗ್ಗೂಡಿಸುವಿಕೆಯಡಿ ಅನುಷ್ಠಾನಿಸುವ ಕುರಿತು.

***********

ಪಶುಪಾಲನೆಯು ಇಂದು ಗ್ರಾಮೀಣ ಭಾಗದ ಲಕ್ಷಾಂತರ ಕುಟುಂಬಗಳಿಗೆ ಜೀವನಾಧಾರವಾದ ಮುಖ್ಯ ವೃತ್ತಿಯಾಗಿದ್ದು, ರಾಷ್ಟ್ರೀಯ ಉತ್ಪನ್ನಕ್ಕೆ, ಗ್ರಾಮೀಣ ಜನರಲ್ಲಿ ಅಪೌಷ್ಟಿಕತೆ ನಿವಾರಣೆಗೆ. ಆರ್ಥಿಕ ಸಬಲತೆಗೆ ಗಣನೀಯ ಕೊಡುಗೆ ನೀಡುತ್ತಿದೆ. ಜಾನುವಾರುಗಳಿಲ್ಲದ ಕೃಷಿಯನ್ನಂತೂ ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಇತ್ತೀಚಿನ ದಿನಗಳಲ್ಲಿ ಹವಾಮಾನ ವೈಪರೀತ್ಯ, ಅಧಿಕ ಮಳೆ, ಬರ, ಇತ್ಯಾದಿ ಪ್ರಕೃತಿ ವಿಕೋಪಗಳಿಂದ ರೈತ ಸಮುದಾಯ ಕಂಗಾಲಾಗುವಂತಹ ಸಮಯದಲ್ಲಿ ಕೃಷಿ ಉಪಕಸುವುಗಳು ರೈತ ಸಮುದಾಯಕ್ಕೆ ಆಸರೆಯಾಗಿ ಜೀವನ ಸಾಗಿಸಲು ಒಂದು ವರದಾನವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ರೈತರು ಕೇವಲ ಆಹಾರ ಧಾನ್ಯಗಳನ್ನು ಬೆಳೆದರೆ ಸಾಲದು. ಅವರು ಆರ್ಥಿಕವಾಗಿ ಸದೃಢರಾಗಬೇಕಾದರೆ ಕೃಷಿ ಉಪಕಸುಬುಗಳನ್ನು ಅಳವಡಿಸಿಕೊಂಡು ವರ್ಷವಿಡೀ ಆದಾಯವನ್ನು ಪಡೆದುಕೊಳ್ಳುವಂತಾಗಬೇಕು.

ಕೃಷಿಯಲ್ಲಿ ಏರುತ್ತಿರುವ ಉತ್ಪಾದನಾ ವೆಚ್ಚ, ಅನಿಶ್ಚಿತ ಹವಾಮಾನ ಮತ್ತು ಕೃಷಿ ಕಾರ್ಮಿಕರ ಕೊರತೆಯಿಂದಾಗಿ ಇಂದು ಹೆಚ್ಚು ಮಂದಿ ಹೈನುಗಾರಿಕೆ, ಕೋಳಿ ಸಾಕಾಣಿಕೆ, ಕುರಿ/ಮೇಕೆ ಸಾಕಾಣಿಕೆ, ಹಂದಿ ಸಾಕಾಣಿಕ ಮಂತಾದ ಪಶುಪಾಲನಾ ಚಟುವಟಿಕೆಗಳ ಮೇಲೆ ಅವಲಂಬಿತರಾಗಿದ್ದಾರೆ. ಇದರಿಂದ ಗ್ರಾಮೀಣ ಪ್ರದೇಶದಲ್ಲಿ ನಿರುದ್ಯೋಗ ಸಮಸ್ಯೆಯನ್ನು ಸ್ವಲ್ಪ ಮಟ್ಟಿಗೆ ನಿವಾರಿಸುವದರ ಜೊತೆಗೆ ರೈತ ಮಹಿಳೆಯರ, ವಿದ್ಯಾವಂತ ಯುವಕರ ಜೀವನಕ್ಕೊಂದು ದಾರಿ ತೋರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ವರ್ಷವಿಡೀ ನಿರಂತರ ಆದಾಯ ನೀಡಬಲ್ಲ, ಪೌಷ್ಟಿಕ ಆಹಾರ ನೀಡಿ ಆರೋಗ್ಯ ಸುಧಾರಣೆಯಲ್ಲಿಯೂ ಉತ್ತಮ ಪಾತ್ರವನ್ನು ನಿರ್ವಹಿಸುತ್ತಿರುವ ಹೈನುಗಾರಿಕೆ, ಕೋಳಿ ಸಾಕಾಣಿಕೆ ಮುಂತಾದವುಗಳು ಇಂದು ವಾಣಿಜ್ಯ ಉದ್ದಿಮೆಗಳಾಗಿ ಬೆಳೆದಿದ್ದು, ದೇಶದ ಆರ್ಥಿಕ ಪರಿಸ್ಥಿತಿಯ ಸುಧಾರಣೆಗೂ ತಮ್ಮ ಅಮೂಲ್ಯ ಕೊಡುಗೆ ನೀಡುತ್ತಿವೆ.

ಹಾಲಿನ ಉತ್ಪಾದನೆಯಲ್ಲಿ ಭಾರತ ಪ್ರಥಮ ಸ್ಥಾನದಲ್ಲಿದ್ದರೂ ಇಂದು ಪ್ರತಿದಿನ ಪ್ರತಿ ವ್ಯಕ್ತಿಗೆ ದೊರೆಯುತ್ತಿರುವ ಹಾಲಿನ ಪ್ರಮಾಣ 200 ಗ್ರಾಂ. ಆದರೆ ವೈಜ್ಞಾನಿಕವಾಗಿ ಇದರ ಪ್ರಮಾಣ 285 ಗ್ರಾಂನಷ್ಟು ಇರಬೇಕು. ಇದನ್ನು ಸಾಧಿಸಬೇಕಾದರೆ ಗ್ರಾಮೀಣ ಭಾಗದಲ್ಲಿ ಹೆಚ್ಚು ಪಶು ಸಂಗೋಪನಾ

ಚಟುವಟಿಕೆಗಳು, ಉತ್ತಮ ಜಾನುವಾರುಗಳ ಆಯ್ಕೆ, ಸಮತೋಲನ ಆಹಾರದ ಪೂರೈಕೆ, ವೈಜ್ಞಾನಿಕ ನಿರ್ವಹಣೆ, ಆರೋಗ್ಯ ರಕ್ಷಣೆ, ವಿವಿಧ ಉತ್ಪನ್ನಗಳ ತಯಾರಿಕೆ ಮತ್ತು ಸುಧಾರಿತ ಮಾರಾಟ ವ್ಯವಸ್ಥೆ ಅತ್ಯಂತ ಅವಶ್ಯವೆನಿಸುತ್ತದೆ.

ಮೊದಲಿನಿಂದಲೂ ಗ್ರಾಮೀಣ ಪ್ರದೇಶದ ಹಳ್ಳಿಗಳಲ್ಲಿ ದನಗಳು ಮೇಯಲೆಂದೇ ಗೋಮಾಳಗಳ ಜಾಗವನ್ನು ಕಾಯ್ದಿರಿಸಿರುವುದರ ಜೊತೆಗೆ ಹುಲ್ಲುಗಾವಲುಗಳು ನಿರ್ವಹಿಸಲಾಗುತ್ತಿತ್ತು. ಕಾಲಕ್ರಮೇಣ ಹಳ್ಳಿಗಳಲ್ಲಿ ಪಶುಪಾಲನೆ ನಿರ್ವಹಣೆ ಹಾಗೂ ಗೋಮಾಳಗಳ ವೈಜ್ಞಾನಿಕವಾಗಿ ಅಭಿವೃದ್ಧಿಯ ಇಲ್ಲದೇ ಇರುವದರಿಂದಾಗಿ ಗೋಮಾಳಗಳು ಪ್ರಯೋಜನಕ್ಕೆಬರದಾಂತಾದ ಜಾಗಗಳಾಗಿವೆ. ಪ್ರಸ್ತುತ ಸಂಕರಣ ಪದ್ಧತಿಯಲ್ಲಿ ಜಾನುವಾರುಗಳ ವಂಶಾಭಿವೃದ್ಧಿಗೆ ವಿಶೇಷ ಗಮನವನ್ನು ಕೊಡುತ್ತಿರುವುದರಿಂದ ಆಹಾರ ಪೂರೈಕ (ಮೇವಿನ) ಬಗ್ಗೆ ಎಲ್ಲಾ ರೀತಿಯ ಕಾಳಜಿ ವಹಿಸುವುದು ಗ್ರಾಮೀಣ ಪ್ರದೇಶದಲ್ಲಿ ಅತಿ ಅವಶ್ಯಕ.

ಈ ನಿಟ್ಟಿನಲ್ಲಿ **ಗ್ರಾಮೀಣಾಭಿವೃದ್ಧಿ ಇಲಾಖೆ, ಕಂದಾಯ ಇಲಾಖೆ, ಅರಣ್ಯ ಇಲಾಖೆ, ಎನ್‌ಆರ್‌ಎಲ್‌ಎಮ್ ಹಾಗೂ ಪಶುಸಂಗೋಪನೆ ಇಲಾಖೆಗಳ ಜಂಟಿ ಸಹಯೋಗದೊಂದಿಗೆ** ಪ್ರಸ್ತುತ ವರ್ಷ ಅಭಿಯಾನ ರೂಪದಲ್ಲಿ (Mission Mode) ನಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಗ್ರಾಮ ಪಂಚಾಯತಿ **ಗೋಮಾಳ ಪ್ರದೇಶವನ್ನು** ವಿವಿಧ ಅನುಷ್ಠಾನ ಇಲಾಖೆಗಳೊಂದಿಗೆ ಒಗ್ಗೂಡಿಸುವಿಕೆಯಡಿ ಅಭಿವೃದ್ಧಿಪಡಿಸಲು ಕಾರ್ಯಕ್ರಮ ರೂಪಿಸಲಾಗಿರುತ್ತದೆ. ಇದರಿಂದ ಗ್ರಾಮೀಣ ಜನರು ಹೆಚ್ಚಿನ ಮಟ್ಟದಲ್ಲಿ ಪಶುಪಾಲನೆ ಮತ್ತು ಪಶುಸಂಗೋಪನೆಯಲ್ಲಿ ತೊಡಗಿಸಿಕೊಳ್ಳಲು ಅನುಕೂಲವಾಗುವುದು. ಅಲ್ಲದೇ ಸ್ಥಳೀಯವಾಗಿ ಉತ್ತಮ ಗುಣಮಟ್ಟದ ಪೌಷ್ಟಿಕವುಳ್ಳ ಹಾಗೂ ಹೆಚ್ಚಿನ ಪ್ರಮಾಣದ ಹಸಿರು ಮೇವು ದೊರೆಯಲಿದ್ದು, ರಾಸ ಮೇವು ಕೂಡ ಉತ್ಪಾದನೆ ಮಾಡುವುದಬಹುದಾಗಿದೆ. ರೈತರಿಗೆ ನಿರಂತರ ಆದಾಯ ಹಾಗೂ ಅರಣ್ಯ ಕೃಷಿಯಲ್ಲಿ ತೊಡಗಿಕೊಳ್ಳಲು ಪ್ರೋತ್ಸಾಹದಾಯವಾಗಿದೆ. ಆದ್ದರಿಂದ ಈ ಹೊಸ ಕಾರ್ಯಕ್ರಮ ರೂಪಿಸಿಕೊಂಡು ಅನುಷ್ಠಾನಗೊಳಿಸಲು ತೀರ್ಮಾನಿಸಲಾಗಿದ್ದು, ಈ ಕೆಳಕಂಡ ಬಹುವಾರ್ಷಿಕ ಮೇವು ಬೆಳೆಗಳನ್ನು ಬೆಳೆಯಲು ಅವಕಾಶ ಕಲ್ಪಿಸಲಾಗಿದೆ.

## Important Fodder Trees

| Sl. No | Common / English Name | Scientific name | Commonly grown area's |
|---|---|---|---|
| 1 | Subabool | *Leucaena leucocephala* | Sub humid, Semiarid |
| 2 | Gliricidia | *Gliricidia sepium* | Humid, sub humid |
| 3 | Agasthi | *Sesbania grandiflora* | Arid and semiarid regions |
| 4 | Shevri | *Sesbania sesban* | Arid and semiarid regions |
| 5 | Khejri | *Prosopis cinereria* | Arid and semiarid regions |
| 6 | Babul | *Acacia Nilotica* | Dry and moist tropics |
| 7 | Neem | *Azadirachta indica* | Dry and moist tropics |
| 8 | Kachnar | *Bauhinia variegata* | Sub tropics, moist and dry tropics |
| 9 | Safed siris | *Albizia procera* | Wet tropical and subtropical |
| 10 | Lallei | *Albizia amara* | Dry tropics |
| 11 | Siris | *Albizia lebbeck* | Moist and dry tropics |

| | | | |
|---|---|---|---|
| 12 | Shisham | *Dalbergia sissoo* | Moist tropics |
| 13 | Mulbery | *Morus alba* | Moist tropics |
| 14 | Drum stick | *Moringa oleifera* | Moist tropics, sub humid Humid |
| 15 | Kikkar | *Prosopis chilensis* | Dry tropics |
| 16 | Ber | *Ziziphus mauritiana* | Dry and moist tropics |
| 17 | ಬಸರೀ ಮರ | *Ficus virens* | |
| 18 | ಹತ್ತಿ ಮರ | *Ficus recimous* | |

**ವಿವಿಧ ಪ್ರದೇಶಗಳಲ್ಲಿ ಬೆಳೆಯಬಹುದಾದದ ಬಹುವಾರ್ಷಿಕ ಹುಲ್ಲಿನ ಬೆಳೆಗಳು:**

| SL.No | Growing conditions | Suitable crops |
|---|---|---|
| 1 | Assured irrigation (Cut and feed) | Bajra napier hybrid, Perineal fodder sorgum<br>Guinea grass and Grazing guinea |
| 2 | Rainfed/Dryland conditions | Signal grass<br>Rhodes grass |
| 3 | Miscellaneous conditions | **Water logged conditions:**<br>Paragrass<br>**Saline/alkali soils:**<br>Rhode grass<br>**High rainfall area (>2500mm)**<br>Nandigrass<br>**Shaded conditions (in plantation crops):**<br>Guinea grass<br>**Eroded soils and undulated conditions:**<br>Grazing guinea<br>Signal grass |

## 1. ಕ್ರಿಯಾ ಯೋಜನೆ ಸಿದ್ಧಪಡಿಸುವಿಕೆ:

ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಗ್ರಾಮೀಣಾಭಿವೃದ್ಧಿ ಇಲಾಖೆ, ಪಶುಪಾಲನೆ ಇಲಾಖೆ ಹಾಗೂ ಅರಣ್ಯ ಇಲಾಖೆಗಳು ಜಂಟಿಯಾಗಿ ಸ್ಥಳ ಸಮೀಕ್ಷೆ ಕೈಗೊಂಡು ವೈಜ್ಞಾನಿಕವಾಗಿ ದೂರು ಸಂವೇದಿ ಹಾಗೂ ಭೌಗೋಳಿಕ ಮಾಹಿತಿ ವ್ಯವಸ್ಥೆ ತಂತ್ರಜ್ಞಾನದೊಂದಿಗೆ ಜಲಾನಯನ ಪರಿಕಲ್ಪನೆಯಡಿ ಕ್ರಿಯಾ ಯೋಜನೆಯನ್ನು ರೂಪಿಸಿಕೊಂಡು ಅನುಷ್ಠಾನಿಸುವುದು.

## 2. ಅನುಷ್ಠಾನ ಕ್ರಮಗಳು ಮತ್ತು ಅನುಷ್ಠಾನ ಇಲಾಖೆಗಳ ಜವಾಬ್ದಾರಿಗಳು:

**ಗೋಮಾಳ ಪ್ರದೇಶ** ಅಭಿವೃದ್ಧಿ ಕಾರ್ಯಕ್ರಮವನ್ನು ಒಗ್ಗೂಡಿಸುವಿಕೆಯಡಿ ಅನುಷ್ಠಾನಗೊಳಿಸಲು ವಿವಿಧ ಅನುಷ್ಠಾನ ಇಲಾಖೆಗಳ ಪಾತ್ರ ಮತ್ತು ಜವಾಬ್ದಾರಿಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

a. ಕಂದಾಯ ಇಲಾಖೆ

- ಗ್ರಾಮ ಪಂಚಾಯತಿ ವ್ಯಾಪ್ತಿಯ ಗೋಮಾಳ ಪ್ರದೇಶಗಳನ್ನು ಸರ್ಕಾರಿ ದಾಖಲೆಗಳನ್ವಯ ಗುರುತಿಸಿ ಚಕ್‌ಬಂದಿ ನಿಗದಿಪಡಿಸುವುದು.
- ಸದರಿ ಗೋಮಾಳ ಅಭಿವೃದ್ಧಿಪಡಿಸಲು ಗ್ರಾಮೀಣಾಭಿವೃದ್ಧಿ ಇಲಾಖೆ ಮತ್ತು ಅರಣ್ಯ ಇಲಾಖೆಗೆ ಸಹಕಾರ ನೀಡುವುದು.

b. ಗ್ರಾಮೀಣಾಭಿವೃದ್ಧಿ ಇಲಾಖೆ:

- ಗ್ರಾಮೀಣಾಭಿವೃದ್ಧಿ ಇಲಾಖೆಯು ಸ್ಥಳೀಯ ಕಂದಾಯ ಇಲಾಖೆಯ ಸಹಕಾರದೊಂದಿಗೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಗೋಮಾಳ ಪ್ರದೇಶದ ಸರಹದ್ದನ್ನು ಗುರುತಿಸುವುದು.
- ನರೇಗಾ ಯೋಜನೆಯಡಿ ಮಾರ್ಗಸೂಚಿಯಂತೆ ವೈಜ್ಞಾನಿಕವಾಗಿ ರೂಪಿತ ಒಗ್ಗೂಡಿಕೆ ಕ್ರಿಯಾ ಯೋಜನೆಯನ್ನು ನಿಗದಿತ ಅವಧಿಯಲ್ಲಿ ಅನುಮೋದಿಸುವುದು.
- ಗೋಮಾಳ ಪ್ರದೇಶ ಅಭಿವೃದ್ಧಿಗೆ ಪೂರಕವಾಗಿ ಸೂಕ್ತ ತಾಂತ್ರಿಕ ತರಬೇತಿಯನ್ನು ಮತ್ತು ಅವಶ್ಯಕತೆಯನ್ನು ತಾಂತ್ರಿಕ ಇಲಾಖೆಗಳ ಸಹಯೋಗದೊಂದಿಗೆ ತರಬೇತಿ ಮತ್ತು ಸಭೆಗಳನ್ನು ಆಯೋಜಿಸಲು ಸಹಕಾರಿಸುವುದು.
- ಸದರಿ ಮಹತ್ವಕಾಂಕ್ಷೆ ಕಾರ್ಯಕ್ರಮದ ಅನುಷ್ಠಾನಕ್ಕೆ ತಾಲ್ಲೂಕು ಮಟ್ಟದಲ್ಲಿ ಸಮನ್ವಯ ಅಧಿಕಾರಿಯಾಗಿ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಕಾರ್ಯನಿರ್ವಹಿಸುವುದು.
- ಜಿಲ್ಲಾ ಪಂಚಾಯತಿಯ ಉಪ ಕಾರ್ಯದರ್ಶಿಗಳು ಜಿಲ್ಲಾ ಮಟ್ಟದಲ್ಲಿ ಜಂಟಿ ನೋಡಲ್ ಅಧಿಕಾರಿಯಾಗಿ ಉಪಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಉಪ ನಿರ್ದೇಶಕರು ಪಶುಪಾಲನೆ ರೊಂದಿಗೆ ಕಾರ್ಯನಿರ್ವಹಿಸುವುದು.

c. ಅರಣ್ಯ ಇಲಾಖೆ:

- ನರೇಗಾ ಯೋಜನೆಯಡಿ **ಗೋಮಾಳ ಪ್ರದೇಶ** ಅಭಿವೃದ್ಧಿ ಕಾರ್ಯಕ್ರಮವನ್ನು ಅನುಷ್ಠಾನಿಸಲು ಅನುಷ್ಠಾನ ಇಲಾಖೆಯಾಗಿ ಕಾರ್ಯನಿರ್ವಹಿಸುವುದು.
- ಅರಣ್ಯ ಇಲಾಖೆಯು, ಗ್ರಾಮೀಣಾಭಿವೃದ್ಧಿ ಇಲಾಖೆ ಹಾಗೂ ಪಶುಪಾಲನೆ ಇಲಾಖೆಯೊಂದಿಗೆ ಜಂಟಿಯಾಗಿ ಸ್ಥಳ ಸಮೀಕ್ಷೆ ಕೈಗೊಂಡು ವೈಜ್ಞಾನಿಕವಾಗಿ ದೂರು ಸಂವೇದಿ ಹಾಗೂ ಭೌಗೋಳಿಕ ಮಾಹಿತಿ ವ್ಯವಸ್ಥೆ ತಂತ್ರಜ್ಞಾನದೊಂದಿಗೆ ಜಲಾನಯನ ಪರಿಕಲ್ಪನೆಯಡಿ ಕ್ರಿಯಾ ಯೋಜನೆಯನ್ನು ರೂಪಿಸಿಕೊಂಡು ಅನುಷ್ಠಾನಿಸುವುದು
- ಗೋಮಾಳ ಪ್ರದೇಶ ಅಭಿವೃದ್ಧಿಗೆ ಬೇಕಾಗುವ ನಿರ್ದಿಷ್ಟ ಗುಣಮಟ್ಟದ ಮತ್ತು ಮೂಲ ಗುಣ ಹೊಂದಿರುವ ಬಹುವಾರ್ಷಿಕ ಹುಲ್ಲು ಮತ್ತು ಮೇವಿನ ಸಸಿಕಡ್ಡಿಗಳ ಬೇಡಿಕೆಯನ್ನು ನಿರ್ಧರಿಸಿ ಅವುಗಳ ಉತ್ಪಾದನೆ ಮತ್ತು ಸರಬರಾಜು ಮಾಡಲು ಇಲಾಖಾ ಮಟ್ಟದಲ್ಲಿ ನರ್ಸರಿಯಲ್ಲಿ ಸಿದ್ಧಪಡಿಸಿ ಅನುಷ್ಠಾನಗೊಳಿಸುವುದು.
- ಗೋಮಾಳದ ಅಂಚಿನ ಸುತ್ತಲು ನಾಟಿ ಮಾಡಲು ಅವಶ್ಯವಿರುವ ಬಹುವಾರ್ಷಿಕ ಮೇವಿನ ಮರಗಳನ್ನು ನಾಟಿ ಮಾಡಲು ಅಗತ್ಯ ಪೂರ್ವಸಿದ್ಧತೆ ಕೈಗೊಳ್ಳುವುದು.

### d. ಪಶುಪಾಲನೆ ಮತ್ತು ಪಶು ಸಂಗೋಪನೆ ಇಲಾಖೆ:

- ತಾಂತ್ರಿಕ ಒಗ್ಗೂಡಿಸುವಿಕೆಯಡಿ ಸೂಕ್ತ ಪ್ರದೇಶವಾರು ಬಹುವಾರ್ಷಿಕ ಮೇವು ಬೆಳೆಗಳ ಬೀಜ ಮತ್ತು ಸಸಿಗಳ ಲಭ್ಯತೆಯನ್ನು ನೋಡಿಕೊಳ್ಳುವುದು
- ರೈತರು, ಕೃಷಿ ವಿಜ್ಞಾನ ಕೇಂದ್ರ, ಕೃಷಿ ವಿಶ್ವವಿದ್ಯಾಲಯ ಮತ್ತು ಕೇಂದ್ರ ಮೇವು ಸಂಶೋಧನಾ ಕೇಂದ್ರಗಳೊಂದಿಗೆ ತಾಂತ್ರಿಕ ವಿಷಯಗಳಿಗೆ ಸಮನ್ವಯ ಸಾಧಿಸುವುದು.
- ಬಹುವಾರ್ಷಿಕ ಮೇವು ಬೆಳೆ ಉತ್ಪಾದನೆ ತಾಂತ್ರಿಕತೆ ಹಾಗೂ ರಾಸ ಮೇವು ತಯಾರಿಕೆ ತಾಂತ್ರಿಕ ತರಬೇತಿಯನ್ನು ನಿರಂತರವಾಗಿ ನೀಡುವುದು.
- ಗ್ರಾಮೀಣ ಪ್ರದೇಶದಲ್ಲಿ ಪಶುಪಾಲನೆ ಸಮಯದಲ್ಲಿ ಬರುವಂತಹ ರೋಗ ಮತ್ತು ಬಾದೆಗಳ ನಿವಾರಣೆಗಾಗಿ ಮುಂಜಾಗ್ರತ ಕ್ರಮಗಳು ಹಾಗೂ ಚಿಕಿತ್ಸಾ ಶಿಬಿರಗಳನ್ನು ಏರ್ಪಡಿಸುವುದು.
- ಉಪ ನಿರ್ದೇಶಕರು ಪಶುಪಾಲನೆ ರವರು ಜಿಲ್ಲಾ ಮಟ್ಟದಲ್ಲಿ ಜಂಟಿ ನೋಡಲ್ ಅಧಿಕಾರಿಯಾಗಿ ಜಿಲ್ಲಾ ಪಂಚಾಯತಿಯ ಉಪ ಕಾರ್ಯದರ್ಶಿಗಳು ಹಾಗೂ ಉಪಅರಣ್ಯ ಸಂರಕ್ಷಣಾಧಿಕಾರಿರವರೊಂದಿಗೆ ಕಾರ್ಯನಿರ್ವಹಿಸುವುದು

## 3. ತಾಂತ್ರಿಕ ಅಂದಾಜು ಪಟ್ಟಿಗಳನ್ನು ತಯಾರಿಕೆ:

- ತಾಂತ್ರಿಕ ಅಂದಾಜು ಪಟ್ಟಿಗಳನ್ನು ತಯಾರಿಸಲು ಅರಣ್ಯ ಇಲಾಖೆಯು ಅನುಮೋದಿತ ದರಪಟ್ಟಿಯಂತೆ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿಕೊಳ್ಳಲು ಕ್ರಮವಹಿಸುವುದು.

## 4. ಅನುಷ್ಠಾನದ ಕಾಲಮಿತಿ:

ಸದರಿ ಕಾರ್ಯಕ್ರಮವನ್ನು 2 ಹಂತದಲ್ಲಿ ಅನುಷ್ಠಾನಗೊಳಿಸಲು ತೀರ್ಮಾನಿಸಲಾಗಿದೆ.

**ಮೊದಲನೇ ಹಂತ- 2022-23ನೇ ಸಾಲಿನ ಆರ್ಥಿಕ ವರ್ಷ**

- ಗ್ರಾಮ ಪಂಚಾಯತಿವಾರು ಲಭ್ಯವಿರುವ ಗೋಮಾಳ ಪ್ರದೇಶವನ್ನು ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಸಹಾಯಕ ನಿರ್ದೇಶಕರು (ಗ್ರಾಉ) ತಾಲ್ಲೂಕಿನ ತಹಸಿಲ್ದಾರ್ ಸಹಕಾರ ಹಾಗೂ ಸಮನ್ವಯದೊಂದಿಗೆ ಗುರುತಿಸಿ ಚಕ್‌ಬಂದಿ ಪಡೆಯುವುದು.
- ಗೋಮಾಳ ಪ್ರದೇಶಾಭಿವೃದ್ಧಿಗೆ ಸೂಕ್ತ ಮೇವಿನಮರ ತಳಿಗಳು ಮತ್ತು ಪಶುಪಾಲನೆಗೆ ಸೂಕ್ತ ಹುಲ್ಲು ಮತ್ತು ಮೇವಿನ ತಳಿಗಳನ್ನು ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಂಡು ಅನುಮೋದನೆ ಪಡೆಯುವುದು.
- ಗೋಮಾಳ ಪ್ರದೇಶಾಭಿವೃದ್ಧಿಗೆ ಸೂಕ್ತ ಮೇವಿನಮರ ತಳಿಗಳು ಮತ್ತು ಪಶುಪಾಲನೆಗೆ ಸೂಕ್ತ ಹುಲ್ಲು ಮತ್ತು ಮೇವಿನ ತಳಿಗಳ ಬೇರಿನಕಡ್ಡಿಗಳು (Slips) ಮತ್ತು ಸಸಿಗಳ ಉತ್ಪಾದನೆಗೆ GPLF ಹಾಗೂ ಅರಣ್ಯ ಇಲಾಖೆಯಿಂದ ಕ್ರಿಯಾ ಯೋಜನೆ ರೂಪಿಸಿಕೊಂಡು ಪ್ರಸ್ತುತ ವರ್ಷದಿಂದ ಸಸೋತ್ಪಾದನೆಗೆ ಕ್ರಮವಹಿಸುವುದು.

**ಎರಡನೇ ಹಂತದಲ್ಲಿ**

- ಆಯ್ಕೆಯಾದ ಗ್ರಾಮ ಪಂಚಾಯತಿವಾರು ಗೋಮಾಳಗಳ ಕ್ರಿಯಾ ಯೋಜನೆಯಂತೆ ಅಂದಾಜುಪಟ್ಟಿ ಸಿದ್ಧಪಡಿಸಿಕೊಳ್ಳುವುದು.
- ಅನುಮೋದಿತ ಅಂದಾಜು ಪಟ್ಟಿಯಂತೆ ಹಾಗೂ ನರೇಗಾ ಅನುಷ್ಠಾನಕ್ಕೆ ಕ್ರಮವಹಿಸುವುದು.

**2A. ಮೊದಲನೇ ಹಂತ- 2022-23ನೇ ಸಾಲಿನ ಆರ್ಥಿಕ ವರ್ಷ:**

| ಕ್ರ. ಸಂ | ಚಟುವಟಿಕೆಗಳು | ಅವಧಿ | ಇಲಾಖೆಗಳು | ಸಮನ್ವಯ ಅಧಿಕಾರಿ | ನೋಡಲ್ ಅಧಿಕಾರಿಗಳು |
|---|---|---|---|---|---|
| 1 | ಗ್ರಾಮ ಪಂಚಾಯತಿವಾರು ಲಭ್ಯವಿರುವ ಗೋಮಾಳ ಪ್ರದೇಶವನ್ನು ಗುರುತಿಸುವುದು. | Dec-2022 | ಗ್ರಾಮೀಣಾಭಿವೃದ್ಧಿ, ಕಂದಾಯ ಇಲಾಖೆ ಮತ್ತು ಅರಣ್ಯ ಇಲಾಖೆ | **Tahasildar, EO, RFO, AD (vet) & DPMU** | **AC, DS, DD(Vet) & DFO** |
| 2 | ಗೋಮಾಳ ಪ್ರದೇಶಾಭಿವೃದ್ಧಿಗೆ ಕ್ರಿಯಾಯೋಜನೆ ರೂಪಿಸುವುದು, ಅನುಮೋದನೆ. | Dec-2022 | ಗ್ರಾಮೀಣಾಭಿವೃದ್ಧಿ, ಪಶುಪಾಲನೆ ಇಲಾಖೆ ಮತ್ತು ಅರಣ್ಯ ಇಲಾಖೆ | | |
| 3 | ಮೇವಿನಮರ ತಳಿಗಳು ಮತ್ತು ಪಶುಪಾಲನೆಗೆ ಸೂಕ್ತ ಹುಲ್ಲು ಮತ್ತು ಮೇವಿನ ತಳಿಗಳ ಬೇರಿನಕಡ್ಡಿಗಳು (Slips) ಮತ್ತು ಸಸಿಗಳ ಉತ್ಪಾದನೆ | Dec-2022-March 2023 | ಗ್ರಾಮೀಣಾಭಿವೃದ್ಧಿ, ಎನ್‌ಆರ್‌ಎಲ್‌ಎಮ್ ಮತ್ತು ಅರಣ್ಯ ಇಲಾಖೆ | | |
| 4 | ಕ್ರಿಯಾಯೋಜನೆಯಂತೆ ನರೇಗಾ ಯೋಜನೆಯಡಿ ಅನುಷ್ಠಾನ ಇಲಾಖೆಗಳಿಗೆ ಅನುದಾನ | Dec-2022 March 2023 | ಗ್ರಾಮೀಣಾಭಿವೃದ್ಧಿ, ಎನ್‌ಆರ್‌ಎಲ್‌ಎಮ್ ಮತ್ತು ಅರಣ್ಯ ಇಲಾಖೆ | | |

**2B. ಎರಡನೇ ಹಂತ- 2023-24ನೇ ಸಾಲಿನ ಆರ್ಥಿಕ ವರ್ಷ:**

| ಕ್ರ. ಸಂ | ಚಟುವಟಿಕೆಗಳು | ಅವಧಿ | ಇಲಾಖೆಗಳು | ಸಮನ್ವಯ ಅಧಿಕಾರಿ | ನೋಡಲ್ ಅಧಿಕಾರಿಗಳು |
|---|---|---|---|---|---|
| 1 | ಅಂದಾಜು ಪಟ್ಟಿ ತಯಾರಿಕೆ ಮತ್ತು ಅನುಮೋದನೆ | May-2023 | ಗ್ರಾಮೀಣಾಭಿವೃದ್ಧಿ, ಪಶುಪಾಲನೆ ಮತ್ತು ಅರಣ್ಯ ಇಲಾಖೆ | **Tahasildar, EO, RFO, AD (vet) & DPMU** | **AC, DS, DD(Vet) & DFO** |
| 2 | ಅನುಮೋದಿತದ ಕ್ರಿಯಾ ಯೋಜನೆಯಂತೆ ಗೋಮಾಳ ಪ್ರದೇಶಾಭಿವೃದ್ಧಿ | June-2023-Oct-2023 | ಗ್ರಾಮೀಣಾಭಿವೃದ್ಧಿ, ಎನ್‌ಆರ್‌ಎಲ್, ಪಶುಪಾಲನೆ ಮತ್ತು ಅರಣ್ಯ ಇಲಾಖೆ | | |
| 3 | ಕ್ರಿಯಾಯೋಜನೆಯಂತೆ ನರೇಗಾ ಯೋಜನೆಯಡಿ ಅನುಷ್ಠಾನ ಇಲಾಖೆಗಳಿಗೆ ಅನುದಾನ | June-2023-Oct-2023 | ಗ್ರಾಮೀಣಾಭಿವೃದ್ಧಿ ಇಲಾಖೆ | | |

**5. ಗೋಮಾಳ ಪ್ರದೇಶಾಭಿವೃದ್ಧಿ (Gomala Development) ಕಾರ್ಯಕ್ರಮದ ಅನುಷ್ಠಾನದ ಗುರಿ:**

ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಸೂಕ್ತ ಗೋಮಾಳ ಪ್ರದೇಶಗಳ ಪ್ರದೇಶಾಭಿವೃದ್ಧಿಯನ್ನು ದಾಖಲಾತಿ ಪ್ರಕಾರ ಲಭ್ಯವಿರುವ ವಿಸ್ತೀರಣಕ್ಕೆ ಜಿಲ್ಲಾ ಯೋಜನಾ ಸಮನ್ವಯ ಅಧಿಕಾರಿಯ ಮಾರ್ಗದರ್ಶನದಂತೆ ಗುರಿ ನಿಗದಿಪಡಿಸಿಕೊಂಡು ಅನುಷ್ಠಾನಿಸುವುದು.

## 6. ಬೆಳೆ ಪದ್ಧತಿ:

ಸದರಿ ಕಾರ್ಯಕ್ರಮದಲ್ಲಿ ಗೋಮಾಳ ಪ್ರದೇಶ ಅಭಿವೃದ್ಧಿಗೆ ಸೂಕ್ತ ಮೇವಿನಮರ ತಳಿಗಳು ಮತ್ತು ಪಶುಪಾಲನೆಗೆ ಸೂಕ್ತ ಹುಲ್ಲು ಮತ್ತು ಮೇವಿನ ತಳಿಗಳನ್ನು ವೈಜ್ಞಾನಿಕವಾಗಿ ಅಳವಡಿಸಿಕೊಂಡು ಅನುಷ್ಠಾನಗೊಳಿಸಬಹುದಾಗಿದೆ.

## 7. ಗೋಮಾಳ ಪ್ರದೇಶದಲ್ಲಿ ಅನುಷ್ಠಾನಗೊಳಿಸಬಹುದಾದದ ಕಾಮಗಾರಿಗಳು:

- ಸರ್ಕಾರಿ ಧಾಖಲಾತಿಯಂತೆ ಕಂದಾಯ ಇಲಾಖೆಯ ಸಹಕಾರದೊಂದಿಗೆ ಗುರುತಿಸಿದ ಗೋಮಾಳ ಪ್ರದೇಶದ ಒಟ್ಟು ವಿಸ್ತೀರ್ಣವನ್ನು ಗಣನೆಗೆ ತೆಗೆದುಕೊಂಡು ಅನುಷ್ಠಾನಿಸುವುದು.
- ಗೋಮಾಳ ಅಂಚಿನ ಸುತ್ತಲು ಕಂದಕ ಬದು ಹಾಗೂ ಜೈವಿಕ ಬೇಲಿ/ಮುಳ್ಳು ತಂತಿ ಬೇಲಿ ಅಳವಡಿಸಿಕೊಳ್ಳುವುದು. (Chain linked mesh) ಅಳವಡಿಕೆಗೆ ಅವಕಾಶವಿಲ್ಲ)
- ಅವಕಾಶ ಹಾಗೂ ಕಲ್ಲುಗಳ ಲಭ್ಯತೆವಿದ್ದಲ್ಲಿ ಕಲ್ಲು ಗೋಡೆಗಳನ್ನು ನಿರ್ಮಿಸುವುದು.
- ಗೋಮಾಳ ಪ್ರದೇಶದ ಭೌಗೋಳಿಕ ಮೇಲ್ಮೈಲಕ್ಷಣಗಳನ್ವಯ ಜಲಾನಯನ ಪರಿಕಲ್ಪನೆಯಲ್ಲಿ ಅನುಷ್ಠಾನಿಸುವುದು.
- ಬಹುವಾರ್ಷಿಕ ಮೇವಿನ ಮರಗಳನ್ನು ಸಮಪಾತಳಿಬದು ಹಾಗೂ ಗೋಮಾಳ ಅಂಚಿನ ಸುತ್ತಲು ಕಂದಕ ಬದುಗಳ ಮೇಲೆ ಹೆಚ್ಚಿನ ಅಂತರದಲ್ಲಿ ನಾಟಿ ಮಾಡುವುದು.
- ಎರಡು ಸಮಪಾತಳಿಬದು ಅಂತರದಲ್ಲಿ ಬಹುವಾರ್ಷಿಕ ಹುಲ್ಲಿನ ಬೇರುಭರಿತ ಕಡ್ಡಿಗಳನ್ನು ಹಾಗೂ ಬೀಜಗಳನ್ನು ಬಿತ್ತನೆ ಮಾಡುವುದು.
- ಬಹುವಾರ್ಷಿಕ ಹುಲ್ಲಿನ ಬೇರುಭರಿತ ಕಡ್ಡಿಗಳನ್ನು GPLF ನರ್ಸರಿಗಳ ಮೂಲಕ ಅಭಿವೃದ್ಧಿಪಡಿಸಿಕೊಂಡು ಖರೀದಿಸಿ ಅನುಷ್ಠಾನಗೊಳಿಸುವುದು.
- ಪ್ರತಿ ಗೋಮಾಳದಲ್ಲಿ ಜಾನುವರುಗಳಿಗೆ ನೀರಿನ ಲಭ್ಯತೆಗಾಗಿ ಗೋಕಟ್ಟೆಗಳನ್ನು ಕಡ್ಡಾಯವಾಗಿ ನಿರ್ಮಿಸುವುದು.
- ಗೋಕಟ್ಟೆಗೆ ನೀರು ಹರಿಯುವಂತೆ ಪೋಷಕ ಜಲವಹಿನಿಗಳನ್ನು ಉಪಚರಿಸುವುದು.
- ಗೋಮಾಳದ ಪ್ರದೇಶವು 100 ಎಕರೆಕ್ಕಿಂತೆ ಹೆಚ್ಚಿನ ಪ್ರದೇಶವಿದ್ದಲ್ಲಿ ಬಹುವಾರ್ಷಿಕ ಮೇವಿನ ಬೆಳೆಗಳ ಜೊತೆಗೆ ಆರ್ಥಿಕ ಲಾಭ ನೀಡುವ ಹಣ್ಣಿನ ಬೆಳೆಗಳನ್ನು ಸಹಿತ ಅಳವಡಿಸಿಕೊಳ್ಳಬಹುದಾಗಿದೆ.

## 8. ಅನುದಾನ:

ಈ ಕಾರ್ಯಕ್ರಮದ ಅನುಷ್ಠಾನಕ್ಕೆ ಅವಶ್ಯಕ ಮೇವಿನ ಸಸಿ ಹಾಗೂ ಬಹುವಾರ್ಷಿಕ ಮೇವಿನ ಸಸಿಗಳ ಬೇರಿನ ಕಡ್ಡಿಗಳ ಉತ್ಪಾದನೆಗೆ ನರ್ಸರಿ ಚಟುವಟಿಕೆ ಹಾಗೂ ವಿವಿಧ ಇತರೆ ಜಲಾನಯನ ಕಾಮಗಾರಿಗಳನ್ನು **ನರೇಗಾ ಅನುದಾನದಡಿ** ಅನುಮೋದಿತ ಅಂದಾಜು ಪಟ್ಟಿಯಂತೆ ಅನುಷ್ಠಾನ ಇಲಾಖೆಗಳು ಅನುಷ್ಠಾನಗೊಳಿಸುವುದು.

## 9. ದಾಖಲೀಕರಣ:

ಸದರಿ ಕಾರ್ಯಕ್ರಮಗಳನ್ನು ಅನುಷ್ಠಾನ ಪೂರ್ವದಲ್ಲಿಯ ವಾಸ್ತವ ಸ್ಥಿತಿ ಹಾಗೂ ಅನುಷ್ಠನ ಹಂತದ ಚಟುವಟಿಕೆಗಳ ಪ್ರಗತಿ, ಅಭಿವೃದ್ಧಿ ಇತ್ಯಾದಿಗಳ ದಾಖಲೀಕರಣವನ್ನು ಮಾಡುವುದು. ಇದಕ್ಕೆ ತಗಲುವ ವೆಚ್ಚಗಳನ್ನು ನರೇಗಾ ಯೋಜನೆಯ IEC ಚಟುವಟಿಕೆಗಳಡಿ ಭರಿಸುವುದು.

**10. <u>ಮೇಲಿಚಾರಣೆ ಮತ್ತು ಪ್ರಗತಿ ಪರಿಶೀಲನೆ:</u>**

ಗೋಮಾಳ ಪ್ರದೇಶಾಭಿವೃದ್ಧಿ ಕಾರ್ಯಕ್ರಮದ ಕಾಲಮಿತಿ ಅನುಷ್ಠಾನದ ಪ್ರಗತಿ ಪರಿಶೀಲನೆಯನ್ನು ನಿಗಧಿತವಾಗಿ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟಗಳಲ್ಲಿ ಜರುಗಿಸಿ ವರದಿ ಸಲ್ಲಿಸುವುದು. ಹಾಗೂ ರಾಜ್ಯ ಮಟ್ಟದಲ್ಲಿ **ಪ್ರತಿ ತಿಂಗಳ 4ನೇ ಶುಕ್ರವಾರ** ಪ್ರಗತಿ ಪರಿಶೀಲನೆಯನ್ನು ಕೈಗೊಳ್ಳಲಾಗುತ್ತದೆ. **(ಅನುಬಂಧ-1)**

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಸಾಮಾಜಿಕ ಅರಣ್ಯ)
ಅರಣ್ಯ ಭವನ, ಬೆಂಗಳೂರು

ಆಯುಕ್ತರು, ಪಶುಪಾಲನಾ ಮತ್ತು
ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು

ಆಯುಕ್ತರು,
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಅಭಿಯಾನ ನಿರ್ದೇಶಕರು
ಡೇ-ಎನ್‌ಆರ್‌ಎಲ್‌ಎಮ್,
ಬೆಂಗಳೂರು

**<u>ಇವರಿಗೆ,</u>**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ ರವರ ಆಪ್ತ ಶಾಖೆಗೆ.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, (ಪಂಚಾಯತ್ ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ ರವರ ಆಪ್ತ ಶಾಖೆಗೆ.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ರವರ ಆಪ್ತ ಶಾಖೆಗೆ.
5. ಸರ್ಕಾರದ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳು.

## ಅನುಬಂಧ-1

### ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಗೋಮಾಳ ಪ್ರದೇಶಾಭಿವೃದ್ಧಿ ಅನುಷ್ಠಾನದ ಪ್ರಗತಿ ವರದಿ

| Sl.No | Taluk | Name of the GPs | Identified eligible Gomal Area in Ha | Whether Included in G. P Approved Action Plan | Gomala Estimate Status | Planting Material Requirement | | | Planting material Production | | | Construction Activities | | | | Achievement | | | |
|---|---|---|---|---|---|---|---|---|---|---|---|---|---|---|---|---|---|---|---|
| | | | | | | Fodder Tree seeddlings | Grass Slips | Total | Forest Department Nursery | GPLF Nursery | Total | Gokatte | SMc Works | RC/BC/ Veg Check | Small Check Dams/ gebian Structures | Gokatte | SMc Works | RC/BC/ Veg Check | Small Check Dams/gebian Structures |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 |
| 1 | | | | | | | | | | | | | | | | | | | |
| 2 | | | | | | | | | | | | | | | | | | | |
| 3 | | | | | | | | | | | | | | | | | | | |
| 4 | | | | | | | | | | | | | | | | | | | |

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು
ಸಾಮಾಜಿಕ ವಲಯ

ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತಿ.........................